Sri ALUR HANUMANTHAPPA.—Sir, on certain pleas, work cannot be stopped. Necessary instructions have been issued to go ahead with the work if there are any differences with regard to the rates of the contractor and the department concerned. They will take action immediately. On that plea work cannot be stopped.

SHORT NOTICE QUESTION.

Transfer of the Kolar Gold Fields to Central Government.

Q.—7. Sri S. SHIVAPPA (Shravanabelagola).—

Will the Government be pleased to state :—

(*a*) when did the State Government transfer the management and administration of Kolar Gold Fields to Central Government;

(*b*) the resons for the transfer;

(*c*) whether the State Legislature was consulted in this matter;

(*d*) if so, when;

(*e*) what are the terms of this transactions;

(*f*) the total revenue that would be transferred from the State to the Centre on account of this transaction annually?

A.—Sri S. NIJALINGAPPA (Chief Minister).—

(*a*) On 1st December 1962.

(*b*) At the instance of the Government of India, who found it necessary to take over the undertaking in order to meet their obligations as a Member of the International Monetary Fund.

(*c*) & (*d*) The matter has been discussed on the floor of the Legislature by way of question tabled and the discussions on the Budget. Apart from this, there was a specific motion on the subject on 25th November 1961 before the House under Rule 59 of the Rules of Procedure of the Lagislative Assembly.

(*e*) These are yet to be finalised. The compensation to be paid to the State Government is estimated at about Rs. 3.5 crores besides payment of royalty, tax on electricity, water supply charges, etc.

(*f*) Does not arise.

ಶ್ರೀ ಎಸ್. ಶಿವಪ್ಪ.—ಭಾರತಸರ್ಕಾರವು ಅಂತರ ರಾಷ್ಟ್ರೀಯ ಹಣಕಾಸಿನ ನಿಧಿ ಸಂಸ್ಥೆಗೆ ಸದಸ್ಯತ್ವವನ್ನು ಪಡೆದುಕೊಂಡಿರುವುದರಿಂದಲೂ, ಭಾರತ ಸರ್ಕಾರದ ಆವಶ್ಯಕ ಕರ್ತವ್ಯಗಳನ್ನು ನೆರವೇರಿಸುವ ಸಲುವಾಗಿ ಈ ಉದ್ಯಮವನ್ನು ಆವರೇ ವಹಿಸಿಕೊಳ್ಳಬೇಕಾದ ಆವಶ್ಯಕತೆ ಕಂಡುಬಂದುದರಿಂದ ಆವರಿಗೆ ಮೈಸೂರಿನ ಚಿನ್ನದ ಗಣಿಯನ್ನು ವಹಿಸಲಾಯಿತೆಂದು ಹೇಳೋಣವಾಗಿದೆ. ಆದರೆ ಈ ಚಿನ್ನದಗಣಿಯನ್ನು ಮೈಸೂರು ಆಡಳಿತದಲ್ಲೇ ಇಟ್ಟು ಆವರು ಇದರ ವ್ಯವಹಾರ ನಡೆಸಿಕೊಂಡು ಹೋಗಿದ್ದರೆ ಆಗ ಆವರಿಗೇನು ತೊಂದರೆ ಆಗುತ್ತಿತ್ತು ?

ಶ್ರೀ ಎಸ್. ನಿಜಲಿಂಗಪ್ಪ.—ನಮ್ಮ ಕೈಲಿ ಆದನ್ನು ನಡೆಸುವುದಕ್ಕೂ ಸಾಧ್ಯವಿರಲಿಲ್ಲ. ಮೇಲಾಗಿ ಒಬ್ಬರು ಮಾಲೀಕರಾಗಿರುವುದು–ಇನ್ನೊಬ್ಬರು ಆಡಳಿತ ನಡೆಸುವುದು ಸಹ ಅಷ್ಟು ಸರಿಯಾದುದಲ್ಲ, ಸೂಕ್ತವಲ್ಲ, ಯೋಗ್ಯವಲ್ಲ–ಎಂತ ಹೇಳಿ ಆದನ್ನು ನಡೆಸಿಕೊಂಡು ಹೋಗಲು ಆವರಿಗೇ ವಹಿಸಿಕೊಡಲಾಯಿತು.

ಶ್ರೀ ಎಸ್. ಶಿವಪ್ಪ.—ಈಗ ನಮ್ಮ ಮೈಸೂರಿನಲ್ಲಿ ರತಕ್ಕ ಭದ್ರಾವತಿ ಉಕ್ಕಿನ ಮತ್ತು ಕಬ್ಬಿಣದ ಕಾರ್ಖಾನೆಗೆ ಕೇಂದ್ರ ಸರ್ಕಾರದವರು ನೆರವನ್ನು ನೀಡುತ್ತಿದ್ದಾರೆ. ಹಾಗೇ ಈ ಚಿನ್ನದ ಗಣಿ ಉದ್ಯಮಕ್ಕೂ ನೆರವನ್ನು ನೀಡಿ ಇದನ್ನು ಮೈಸೂರು ಸರಕಾರದ ಆಡಳಿತದಲ್ಲೇ ನಡೆಸಿಕೊಂಡು ಬರುವಂತೆ ಮಾಡಲು ಆವರಿಗೆ ತೊಂದರೆ ಏನಿತ್ತು?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೂ–ಇದಕ್ಕೂ ಬಹಳ ವ್ಯತ್ಯಾಸವಿದೆ. ಚಿನ್ನಕ್ಕೆ ನಾವು ಚಾರ್ಜು ಮಾಡುವುದೇ ಒಂದು ರೇಟಾದರೆ ಅದಕ್ಕೆ ಇಂಟರ್–ನೇಶನಲ್ ರೇಟೇ ಬೇರೆ ಇದೆ. ಅದಕ್ಕೂ–ಇದಕ್ಕೂ ಹೋಲಿಕೆ ಹಾಕುವುದು ಸರಿಯಾಗಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಗಣಿಯನ್ನು ಕೇಂದ್ರಕ್ಕೆ ಸ್ಥಳಾಂತರ್ಗತ ಮಾಡುವ ಮುನ್ನ ಈ ಸಭೆ ಅಭಿಪ್ರಾಯಪಡೆದು ಮಾಡುತ್ತೇವೆಂದು ಈ ಹಿಂದೆ ಆಶ್ವಾಸನ ಕೊಟ್ಟಿದ್ದ ವಿಚಾರವೇನಾಯಿತು ?

ಶ್ರೀ ಎಸ್. ನಿಜಲಿಂಗಪ್ಪ.—ನಾನು ರೆಕಾರ್ಡನ್ನು ನೋಡಿದ್ದರಲ್ಲಿ ಅಂಥ ಆಶ್ವಾಸನ ಕೊಟ್ಟ ಹಾಗೆ ಎಲ್ಲಿಯೂ ಕಂಡು ಬರಲಿಲ್ಲ. ಕೇಂದ್ರಕ್ಕೆ ಇದನ್ನು ವಹಿಸಿಕೊಡುವ ವಿಚಾರದಲ್ಲಿ ಈ ಸಭೆಯಲ್ಲಿ ಆದನ್ನು ಹಿಂದೆಯೇ ಸ್ಪಷ್ಟಪಡಿಸಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದಾಗ್ಗೂ ಈ ಸಭೆಯನ್ನು ತಾವು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಈ ಕಾರ್ಯ ಮಾಡಿದ್ದರೆ ಉಚಿತವಾಗಿರುತ್ತಿರಲಿಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಇದು ತಮ್ಮ ಅಭಿಪ್ರಾಯದ ಮಾತಾಯಿತು.

ಶ್ರೀ ಗಾರ್ಜೆ ಮರುಳಪ್ಪ.—ಈ ಚಿನ್ನದ ಗಣಿಯನ್ನು ರಾಷ್ಟ್ರೀಕರಣ ಮಾಡುವ ಮುನ್ನ ಇದನ್ನು ನಡೆಸಲು ಮೈಸೂರು ಸರ್ಕಾರಕ್ಕೆ ಯೋಗ್ಯತೆ ಇಲ್ಲ ಅಂತ ಆಲೋಚನೆ ಮಾಡಲಾಗಿತ್ತೇ?

ಶ್ರೀ ಎಸ್. ನಿಜಲಿಂಗಪ್ಪ.—ಯೋಗ್ಯತೆಯಿದೆ. ಆದರೆ ಧಾರಣೆಯಲ್ಲಿ ಏರುಪೇರಾಗಿರುತ್ತೆಂದು ಹೀಗೆ ಮಾಡಲಾಯಿತು.

ಶ್ರೀ ಗಾರ್ಜೆ ಮರುಳಪ್ಪ.—ಈ ಗಣಿಯನ್ನು ರಾಷ್ಟ್ರೀಕರಣ ಮಾಡತಕ್ಕ ವಿಚಾರದಲ್ಲಿ ಏನೇನೋ ಕುಂಭಕೋಣ ಮಾಡಿದ್ದಾರೆಂತ ಜನ ಹೇಳಿಕೊಳ್ಳುತ್ತಿದ್ದಾರೆ. ಅದು ನಿಜವೋ-ಅಲ್ಲವೋ?

ಶ್ರೀ ಎಸ್. ನಿಜಲಿಂಗಪ್ಪ.—ಸುಳ್ಳು.

ಶ್ರೀ ಎಸ್. ಎಂ. ಕೃಷ್ಣ.—ಈ ಗಣಿಯನ್ನು ಕೇಂದ್ರ ಸರ್ಕಾರಕ್ಕೊಪ್ಪಿಸಿದನಂತರ ನಮ್ಮ ಸರ್ಕಾರದ ಸ್ಥಾನಮಾನವೇನು ಇದರ ಆದಾಯದ ಬಗ್ಗೆ?

ಶ್ರೀ ಎಸ್. ನಿಜಲಿಂಗಪ್ಪ.—ನಿಗದಿ ಮಾಡಿರತಕ್ಕ ರಾಯಲ್ಟಿ ಬರುತ್ತೆ. ಎಲೆಕ್ಟ್ರಿಕ್ ಛಾರ್ಜಸ್ ಬರುತ್ತೆ—ನೀರಿನ ಬಗ್ಗೆ ಖರ್ಚನ್ನು ಕೊಡುತ್ತಾರೆ. ಇನ್ನೂ 3-4 ವಿಚಾರಗಳಿವೆ. ಅವುಗಳ ಬಗ್ಗೆ ಇನ್ನೂ ವ್ಯವಹಾರ ನಡೆಯುತ್ತಿದೆ.

Sri G. V. GOWDA.—What is the amount of Royalty that has been agreed to by the Government of India? Is there any specific amount earmarked for tax on electricity?

Sri S. NIJALINGAPPA.—Earmarked is the rate fixed by the Electricity Board. Government levies a tax upon that. It comes to 18 lakhs on an average. Regarding Royalty it is 6¼ percent.

Sri G. V. GOWDA.—6¼ percent on what?

Sri S. NIJALINGAPPA.—6¼ percent of the sale amount at the market rate. Now it will be the international market rate.

ಶ್ರೀ ಬಿ. ಎಲ್. ಗೌಡ.—ಈಗ ಇದರ ಪರಿಣಾಮವಾಗಿ ನಮ್ಮ ಸರ್ಕಾರಕ್ಕೆ ಎಷ್ಟು ಲುಕ್ಸಾನಾಗುತ್ತದೆ?

ಶ್ರೀ ಎಸ್. ನಿಜಲಿಂಗಪ್ಪ.—ನಮಗೇನೂ ಲುಕ್ಸಾನಾಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದು ನಮ್ಮ ಕೈಗಾರಿಕೆಗಳಲ್ಲಿ ಅತಿ ಮುಖ್ಯವಾದ ಕೈಗಾರಿಕೆಯಾಗಿತ್ತು. ಸಭೆ ಅಭಿಪ್ರಾಯ ತೆಗೆದುಕೊಳ್ಳತಕ್ಕ ಬಗ್ಗೆ ಸರ್ಕಾರದ ಧೋರಣೆ ಏನಿತ್ತು?

ಶ್ರೀ ಎಸ್. ನಿಜಲಿಂಗಪ್ಪ.—ಈ ಪ್ರಶ್ನೆಗಾಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ.—ಈ ಪ್ರಶ್ನೆ ಹಣಕಾಸಿಗೆ ಸಂಬಂಧವಾದ್ದರಿಂದ ಅವರಿಗೂ ನಮಗೂ ಈ ನಡುವೆ ನಡೆದಿರತಕ್ಕ ಕರಾರನ್ನು ಮತ್ತು ಇತರ ವಿಷಯಗಳನ್ನು ಈ ಸಭೆಯ ಮುಂದೆ ಇಟ್ಟು ಒಪ್ಪಿಗೆ ಪಡೆದಿದ್ದೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೆ ಇಲ್ಲಿ ಒಪ್ಪಿಗೆ ಕೊಡಬೇಕಾದುದು ಇಲ್ಲ. ಏಕೆಂದರೆ ಹಿಂದೆ ಈ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ತೀರ್ಮಾನವಾಗಿದೆ. ಈಗ ಇದನ್ನು ಅವರಿಗೆ ವಹಿಸಿಕೊಡತಕ್ಕ ಅವಶ್ಯಕತೆ ಬಂದಿದೆ ಎಂಬುದಾಗಿ ಈ ಸರ್ಕಾರದವರು ಈ ಸಭೆಗೆ ತಿಳಿಸಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಈಗ ಕರಾರು ಹೊಸದಾಗಿ ಮಾಡಿರುವುದರಲ್ಲಿ ಯಾವ ಕಂಡೀಷನ್‌ಗಳ ಮೇಲೆ ಅದನ್ನು ಕೊಟ್ಟಿದ್ದೀರಿ ಎಂಬುದನ್ನು ಈ ಸಭೆಯವರು ತಿಳಿಯಬೇಕಾದುದು ಬೇಕಿಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಅವಶ್ಯಕವಿಲ್ಲ.

ಶ್ರೀ ಇ. ನಾರಾಯಣ ಗೌಡ.—ಹಿಂದೆ ಜಾರ್ಜ್ ಟೈಲರ್ ಕಂಪೆನಿಯವರು ಈ ಗಣಿಯ ಬಗ್ಗೆ ಕರಾರು ಮಾಡಿಕೊಂಡಾಗ ಕೇಂದ್ರ ಸರ್ಕಾರಕ್ಕೆ ಮುಂದೆ ಕೊಡುವಾಗ ಮೈಸೂರು ಸರ್ಕಾರಕ್ಕೆ ಕಂಪೆನ್ಸೇಷನ್ ಕೊಡಬೇಕೆಂದು ತೀರ್ಮಾನವಾಗಿರಲಿಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಕಂಪೆನ್ಸೇಷನ್ ಕೊಡುವುದು ಅಲ್ಲದೆ ಈಚೆಗೆ ಖರ್ಚು ಮಾಡಿರುವುದು 3 ಕೋಟಿ 35 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ. ಇನ್ನು 35 ಲಕ್ಷ ರೂಪಾಯಿಗಳಲ್ಲಿ ಅವರಿಗೂ ನಮಗೂ ಭಿನ್ನಾಭಿಪ್ರಾಯವಿದೆ. ಅಲ್ಲಿನ ಫೈನಾನ್ಸ್ ಮಿನಿಸ್ಟರೂ ಮತ್ತು ನಾವೂ ಕೂತು ಮಾತನಾಡಬೇಕಾಗಿದೆ.

Sri SANJEEVANATH IKALA.—Is there an agreement between the Government of Mysore and the Government of India to include a representative of Mysore on the Managing Commitee?

Sri S. NIJALINGAPPA.—There will be two representatives of Mysore Government on the Managing Committe.

ಶ್ರೀ ಬಿ. ಹುಚ್ಚೇಗೌಡ.—ಈಗ ಪರಿಹಾರದ ಮೊಬಲಗು ಜೊತೆಯಲ್ಲಿ ರಾಜಧನ, ವಿದ್ಯುಚ್ಛಕ್ತಿ ಮೇಲಣ ತೆರಿಗೆ, ನೀರು ಸರಬರಾಯಿ ವೆಚ್ಚ—ಇವೆಲ್ಲಾ ಬರುತ್ತದೆಂದು ಹೇಳಿದ್ದೀರಿ. ಅಂದಮೇಲೆ ಇದನ್ನು ಇನ್ನು

(ಶ್ರೀ ಬಿ. ಹುಚ್ಚೇಗೌಡ)

ಯಾರಿಗಾದರೂ ಕೊಟ್ಟಿದ್ದರೆ ಆ ಉತ್ಪತ್ತಿ ಬರುತ್ತಿರಲಿಲ್ಲವೇ? ಇದರಲ್ಲಿ extra income ಯಾವ ರೀತಿ ಆಯಿತು? ಎಲ್ಲವನ್ನೂ ಕಲಸು ಮೇಲೋಗರ ಮಾಡುತ್ತಿದ್ದೀರಿ. ಪರಿಹಾರದ ಮೊಬಲಗಿನ ಜೊತೆಯಲ್ಲಿ ಬೇರೆ ರೀತಿಯ ಉತ್ಪತ್ತಿಯೂ ಬರುತ್ತದೆಂದು ಹೇಳಿದ್ದೀರಿ ಅದು ಆಡಿಷನಲ್ ಉತ್ಪತ್ತಿಯೇ?

ಶ್ರೀ ಎಸ್. ನಿಜಲಿಂಗಪ್ಪ.—ಅದೇನೂ ಆಡಿಷನಲ್ ಇಷ್ಕಂ ಅಲ್ಲ. ನಾವು ಆ ರೀತಿ ಟ್ಯಾಕ್ಸ್ ಮಾಡುವುದಕ್ಕೂ ಆಗುವುದಿಲ್ಲ. ಕೇಂದ್ರ ಸರ್ಕಾರ ಯಾವುದೇ ಕೈಗಾರಿಕೆಯಲ್ಲಿದ್ದರೂ ಅದನ್ನು ಟ್ಯಾಕ್ಸ್ ಎಂದು ಕಾನೂನು ಫ್ರುಕಾರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದನ್ನು ಬೇರೆ ರೂಪದಲ್ಲಿ ತೆಗೆದುಕೊಳ್ಳಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾವ್ಯಾವ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಇಷ್ಟೇ ಮೊಬಲಗು ಎಂಬುದಾಗಿ ಒಂದು ಆಂಕಿ ಅಂಶವನ್ನು ನಿರ್ಧಾರ ಮಾಡಿದ್ದೀರಿ?

ಶ್ರೀ ಎಸ್. ನಿಜಲಿಂಗಪ್ಪ.—ಹಿಂದೆ ಜಾರ್ಟ್ಪಿಲರ್ ಕಂಪನಿಯವರು ಒಂದು ಕೋಟಿ 60 ಲಕ್ಷ ರೂಪಾಯಿಗಳನ್ನು ಈ ಗಣಿಗೋಸ್ಕರ ಹಾಕಿದರು. ಆ ಹಣವನ್ನು ತೆಗೆದುಕೊಂಡಿರುವುದಲ್ಲದೆ 335 ಲಕ್ಷ ರೂಪಾಯಿಗಳು ನಮಗೆ ಈಗ ಬಂದಿದೆ. ಇನ್ನು ಕೆಲವು ವಿಚಾರಗಳು ತೀರ್ಮಾನ ಮಾಡಬೇಕಾಗಿವೆ. ಅದಕ್ಕೋಸ್ಕರವಾಗಿ ಸುಮಾರು 3½ ಕೋಟಿ ರೂಪಾಯಿಗಳು ಬೇಕು ಎಂದು ಹೇಳಿದೆ.

Sri G. V. GOWDA.—Is there any likelihood of the Government of India selling the gold at a price higher than what is prevailing in the international market?

Sri S. NIJALINGAPPA.—No.

Sri S. SIVAPPA.—May I know where was the need for such a hurry to transfer the gold mines to the Government of India without finalising the transaction?

Sri S. NIJALINGAPPA.—There was a real hurry and we had to transfer it. The only question is that of payment of additional compensation for loss of future profits we have asked for. Let me say that it would be wisdom for the house to keep quiet. Next is about the sand available there. This is a matter which we will have to be discussed. They say it is useless but we feel that we can use it. There are lakhs of tons of it. The third item is the transfer of Bethamangal water supply. This is a small matter we have to discuss.

Sri C. J. MUKKANNAPPA.—May I know the terms and conditions of the lease with the Government of India? Is it lease or transfer?

Sri S. NIJALINGAPPA.—It will never be an outright transfer between one Government and the other. It is in law a lease.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ಪಕ್ಷ ನಮಗೆ ಮುಂದೆ ಶಕ್ತಿ ಇದ್ದಾಗ ಇದೇ ಚಿನ್ನದ ಗಣಿಯನ್ನು ಮತ್ತೆ ಕೇಂದ್ರ ಸರ್ಕಾರದ ಕೈಯಿಂದ ನಮಗೆ ಟ್ರಾನ್ಸ್ಫರ್ ಮಾಡುವುದಕ್ಕೆ ಏನಾದರೂ ಒಂದು ಈಗಲೇ ಕಂಡೀಷ್ ಕ್ಲಾಜು ಕರಾರಿನಲ್ಲಿ ಹಾಕುವುದಕ್ಕೆ ಆಗುವುದಿಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಮತ್ತು ನಾನು ಇಲ್ಲಿಯೇ ಇದ್ದರೆ ಅದನ್ನು ವಿಚಾರ ಮಾಡೋಣ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾವು ಇಲ್ಲಿ ಮಾಡಿ ಬಿಟ್ಟು ಹೋದರೆ ಮುಂದಿನವರು ಅದನ್ನು ಸರಿಯಾಗಿ ನಡೆಸಬಹುದಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಈ ವಿಚಾರ ಎರಡು ಸರ್ಕಾರಗಳದು. ಒಂದು ಭಾಗದ ಒಂದೇ ಅಂಗದ ಎರಡು ಭಾಗಗಳು. ಅದಕ್ಕೇನು ಅಡ್ಡಿ ಬರಲಿಕ್ಕಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಈಗ ಇನ್ನು 35 ಲಕ್ಷದವರೆಗೆ ಕ್ಲೈಮ್ಸ್ ಮಾಡುತ್ತಿದ್ದೇವೆಂದು ಹೇಳಿದಿರಿ. ಅದು 3½ಕೋಟಿ ರೂಪಾಯಿಗಳೊಳಗೆ ಸೇರಿದೆಯೋ?

ಶ್ರೀ ಎಸ್. ನಿಜಲಿಂಗಪ್ಪ.—ಈಗ 3·35 ಕೋಟಿ ರೂಪಾಯಿಗಳು ಸೆಟಲ್ ಆಗಿದೆ. ಇನ್ನು ಈಗ 34.5 ಲಕ್ಷ ರೂಪಾಯಿಗಳ ವಿಚಾರ ಚರ್ಚೆಮಾಡಬೇಕಾಗಿದೆ. ಹೇಗೇಗೆ ಇತರ ಐಟಂಗಳು ಅವುಗಳಲ್ಲಿ ಸೇರಿವೆ ಎಂಬುದು ಒಂದು ಪ್ರಶ್ನೆ ಸುಮಾರು 25 ಲಕ್ಷ ರೂಪಾಯಿಗಳನ್ನಾದರೂ ಕೊಡಬಹುದು ಎಂದು ನಮ್ಮ ನಿರೀಕ್ಷೆ. ಒಟ್ಟಿನಲ್ಲಿ 3½ ಕೋಟಿಗೆ ಕಮ್ಮಿ ಆಗಲಾರದು.

Sri M. Y. GHORPADE.—Has the Government considered the compensation to be full and adequate by commercial standards?

Sri S. NIJALINGAPPA.—Yes.

Sri M. Y. GHORPADE.—When the Government of Mysore expect to get the compensation?

Sri S. NIJALINGAPPA.—We owe them some money. They have advanced some amount. Barring that everything we will have to get in cash.

ಶ್ರೀ ಬಿ. ಹುಚ್ಚೇಗೌಡ.—ಈ 3½ ಕೋಟಿ ರೂಪಾಯಿಗಳ ಜೊತೆಗೆ ನಮಗೆ ಖರ್ಚಾಗಿರುವುದು ಪೂರ್ತಿ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.— ಹೌದು.

ಶ್ರೀ ಗಂಗಾಧರ ನಾಮೋಷಿ.—ಈಗ ಭಂಗಾರದ ಅವಶ್ಯಕತೆ ಅಷ್ಟಾಗಿರುವಾಗ ಈ ಕೋಲಾರದ ಚಿನ್ನದ ಗಣಿ ಜೊತೆಗೆ ಹಟ್ಟಿ ಗೋಲ್ಡ್ ಫೀಲ್ಡನ್ನು ಏತಕ್ಕೆ ಕೇಂದ್ರ ಸರ್ಕಾರದವರು ತೆಗೆದುಕೊಳ್ಳಲಿಲ್ಲ ?

MR. SPEAKER.— It does not arise out of the main question.

ಶ್ರೀ ವೆಂಕಟಗಿರಿಯಪ್ಪ.—ಭಾರತ ಸರ್ಕಾರ ದೊಡನೆ ಈ ಚಿನ್ನದ ಗಣಿ ವ್ಯವಹಾರ ನಡೆಸಿ ತೀರ್ಮಾನಿಸುವಾಗ ಯಾರ್ಯಾರು ಇದ್ದರು ?

ಶ್ರೀ ಎಸ್. ನಿಜಲಿಂಗಪ್ಪ.— ಅಲ್ಲಿಂದ 2-3 ಜನರು ಬಂದಿದ್ದರು. ನಮ್ಮ ಸರ್ಕಾರದ ಪರವಾಗಿ ನಮ್ಮ ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಮತ್ತು ಭಾರತ ಸರ್ಕಾರದ ಪರವಾಗಿ ಅವರ ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಇದ್ದರು.

Sri H. R. KESHAVA MURTHY.— Have the Government considered the question of future employment of Mysoreans in the Gold Mines? Will there be any definite proportion for Mysoreans in future ?

Sri S. NIJALINGAPPA.—I do not think there is any necessity to have such specific condition.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಈ ಕೋಲಾರದ ಚಿನ್ನದ ಗಣಿಯನ್ನು ಕೇಂದ್ರ ಸರ್ಕಾರದವರ ಕೈಲಿ ಕೊಟ್ಟ ಮೇಲೆ ಮತ್ತೆ ಇನ್ನಾವುದಾದರೂ ಚಿನ್ನದ ಗಣಿಯನ್ನು ಅವರ ಕೈಗೆ ಕೊಡುವುದಕ್ಕೆ ಯೋಜನೆ ಮಾಡಿದ್ದೀರಾ ?

MR. SPEAKER.—It does not arise out of the main question.

ಶ್ರೀ ಇ. ನಾರಾಯಣಗೌಡ.—ರಾಯಲ್ಟಿ ಒಂದರಿಂದ ಪಬ್ಲಿಕ್‌ನಿಂದ ಎಷ್ಟು ಹಣ ಸರ್ಕಾರಕ್ಕೆ ಬರುತ್ತಿತ್ತೋ ಅಷ್ಟು ಹಣವನ್ನು ಈಗಿನ ಬದಲಾವಣೆಯಿಂದ ಪಡೆಯುತ್ತೀರೋ ?

ಶ್ರೀ ಎಸ್. ನಿಜಲಿಂಗಪ್ಪ.—ಆದು ಬರತಕ್ಕದ್ದು ಶೇ. 6¼ ರಷ್ಟು. ಎಷ್ಟು ಖರ್ಚಾಗುತ್ತದೋ ಮತ್ತು ಆಗ ಎಷ್ಟು ಧಾರಣೆ ಇರುತ್ತದೋ ಅಷ್ಟು ಬರುತ್ತದೆ.

2.00 P.M.

Sri K. LAKKAPPA.—What is the difficulty of Govt. to place the agreement before the House ?

Sri S. NIJALINGAPPA.—I have answered it.

MR. SPEAKER.— Questions are over.

Members' Representations.

Sri M. C. BASAPPA (Chamarajanagar).—Sir, today only 5 questions are answered and the questions sent up 20 days ago have not been answered on the floor of the House. According to the Rules, 14 days' time is given to the Depts. to give the replies to questions. May I know the reason for it ?

Sri C. J. MUCKANNAPPA (Sira).— For my six questions, answers could be had from the Vidhana Soudha or from some of the offices round about here. Still, none of them have been answered.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಮಾರ್ಚಿ ತಿಂಗಳಿನಲ್ಲಿ ಬರೆದು ಕಳುಹಿಸಿರುವ ಪ್ರಶ್ನೆಗಳಿಗೆ ಇನ್ನೂ ಉತ್ತರ ಬಂದಿಲ್ಲ. ಆಫೀಸಿನಲ್ಲಿ ವಿಚಾರ ಮಾಡಿದರೆ ರಿಮೈಂಡರ್ ಕೊಟ್ಟು ಹತ್ತಾರು ಸಾರಿ ಬರೆದಿದ್ದೀವೆ ಎಂದು ಹೇಳುತ್ತಾರೆ. ಸಂಬಂಧಪಟ್ಟ ಆಫೀಸರುಗಳು ಇನ್ನೂ ಉತ್ತರ ಕೊಟ್ಟಿಲ್ಲ. ಈ ರೀತಿ ನಿಧಾನವಾಗುತ್ತಾ ಇದೆ. ಇದರ ಬಗ್ಗೆ ಏನು ಮಾಡಬೇಕು ಸ್ವಾಮಿ ?

MR. SPEAKER.—I am really not happy about the answers not being given in proper time. In fact, there were only four questions and one short notice question today, and I have got a list which I will pass on to the Leader of the House. He may kindly see what can be done about it. After all, we have got only two days more.

Sri S. NIJALINGAPPA (Chief Minister).—I will see that these matters are attended to expeditiously.

Sri S. SHIVAPPA.—(Sravanabelgola).—Sir, I had written a letter to you regarding the correctness of the